ಹೇಳಬೇಕಾಗುತ್ತದೆ. ಏಕೆಂದರೆ ಇದು ಇಡೀ ರಾಷ್ಟ್ರಕ್ಕೆ ಸಂಬಂಧ ಪಟ್ಟಿರುವುದರಿಂದ ಆರ್.ಇ.ಸಿ. ಸ್ಕೀಮ್‌ನಲ್ಲಿ ನಾವು ಏನು ಸಾಲ ತೆಗೆದುಕೊಂಡು ಕೆಲಸ ಪ್ರಾರಂಭಿಸಿದ್ದೇವೆ, ಅದು 31ನೇ ಮಾರ್ಚ್‌ಗೆ ಕೊನೆಯಾಗುತ್ತದೆ. ಇದನ್ನು ಇನ್ನೂ ಮುಂದುವರಿಸುತ್ತಾರೆಯೇ ಎಂಬ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

ಶ್ರೀ ಎ.ವೀರಕುಮಾರ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಆರ್.ಇ.ಸಿ. ಸ್ಕೀಮ್ ಕಂಟಿನ್ಯೂ ಆಗುತ್ತದೆ. ಅದು ಈ ವರ್ಷ ಅಷ್ಟೇ ಅಲ್ಲ ಮುಂದೆ ಕೂಡ ಕಂಟಿನ್ಯೂ ಆಗುತ್ತದೆ. ಮಾನ್ಯ ಶಾಸಕರು ಹೇಳಿದ ಪ್ರಕಾರ ಉಡುಪಿ-ಮಂಗಳೂರು ಡೆಪ್ಯುಟಿ ಕಮೀಷನರ್ ಹತ್ತಿರ ಈ ಲೈನ್ ಬಗ್ಗೆ ಕೆಲವು ಕೇಸುಗಳು ಇವೆ. ಆ ಕೇಸುಗಳು ಕ್ಲಿಯರ್ ಆದ ಮೇಲೆ ಲೈನ್ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ಅಧಿಕಾರಿಗಳು ಅವುಗಳನ್ನು ಗುರುತು ಮಾಡಿ ಆ ಪ್ರಕಾರ ಲೈನ್‌ನ್ನು ಮಾಡುತ್ತೇವೆ. ಆರ್.ಇ.ಸಿ. ಯೋಜನೆಯನ್ನು ಮುಂದುವರೆಸುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಆರ್.ಇ.ಸಿ. ಪ್ರೋಗ್ರಾಮ್‌ನಲ್ಲಿ ಕರ್ನಾಟಕದಲ್ಲಿ 156 ಕೋಟಿ ರೂಪಾಯಿಗಳು ಬಿಡುಗಡೆಯಾಗುವುದಕ್ಕೆ ಕರ್ನಾಟಕ ಸರ್ಕಾರದಿಂದ ಏನೂ ಗ್ಯಾರಂಟಿ ಕೊಟ್ಟಿಲ್ಲವಾದ್ದರಿಂದ ಇದು ಪೆಂಡಿಂಗ್ ಇದೆಯೆಂದು ನಾನು ಕಳೆದ ಸಲ ಪ್ರಶ್ನೆ ಕೇಳಿದಾಗ ಉತ್ತರ ಬಂದಿದೆ. ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು. ಆರ್.ಇ.ಸಿ. ಪ್ರೋಗ್ರಾಮ್‌ನಿಂದ ಕೇಂದ್ರಸರ್ಕಾರದಿಂದ 156 ಕೋಟಿ ರೂಪಾಯಿಗಳ ಹಣ ಬಿಡುಗಡೆಯಾಗುವುದಕ್ಕೆ ಕರ್ನಾಟಕ ಸರ್ಕಾರ ಗ್ಯಾರಂಟಿ ಕೊಟ್ಟಿಲ್ಲ. ಆದ್ದರಿಂದ ಹಣ ಬಿಡುಗಡೆಯಾಗಿಲ್ಲವೆಂದು ನನಗೆ ಉತ್ತರ ಬಂದಿದೆ. ತಾವು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಎ.ವೀರಕುಮಾರ್ ಪಾಟೀಲ್: ಕರ್ನಾಟಕ ಸರ್ಕಾರದಿಂದ ಗ್ಯಾರಂಟಿ ಕೊಟ್ಟಿದ್ದೇವೆ. ಅಮೌಂಟ್ ರಿಲೀಸ್ ಆಗುತ್ತಿದೆ.

ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಲ್ಲಿ ಕಲ್ಲು-ಮರಳು ಸಾಗಾಣಿಕೆ ವಾಹನಗಳಿಂದ ಅಪಘಾತ ಸಂಭವಿಸುತ್ತಿರುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 87(529)

ಸದಸ್ಯರ ಹೆಸರು: ಶ್ರೀ ಶ್ರೀನಿವಾಸಗೌಡ, ಕುದುಪನಹಳ್ಳಿ ಕೆ.(ಕೋಲಾರ)

ಪ್ರಶ್ನೆ

1) ಹಿಂದಿನ ವರ್ಷದಿಂದ ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಲ್ಲಿ ಕಲ್ಲು ಮತ್ತು ಮರಳು ಸಾಗಾಣಿಕೆ ಮಾಡುವುದಕ್ಕೆ ಎಷ್ಟು ವಾಹನಗಳು ಅಪಘಾತಕ್ಕೆ ಈಡಾಗಿದೆ?

2) ಅಪಘಾತಗಳಲ್ಲಿ ಸತ್ತವರ ಸಂಖ್ಯೆ ಎಷ್ಟು?

3) ಈ ರೀತಿಯ ಅಪಘಾತಗಳನ್ನು ಕಡಿಮೆ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು?

4) 15 ವರ್ಷಗಳಷ್ಟು ಹಳೆಯದಾದ ಸಾಗಾಣಿಕೆ ವಾಹನಗಳನ್ನು ಸ್ಥಗಿತಗೊಳಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

5) ಕ್ರಮ ಜರುಗಿಸಿದಲ್ಲಿ ಇಲ್ಲಿಯವರೆಗೆ ಎಷ್ಟು ವಾಹನಗಳನ್ನು ಸ್ಥಗಿತಗೊಳಿಸಲಾಗಿದೆ?

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಉತ್ತರ

1) ಬೆಂಗಳೂರು ಜಿಲ್ಲೆಯಲ್ಲಿ 54 ಕೋಲಾರ ಜಿಲ್ಲೆಯಲ್ಲಿ 29 ಮತ್ತು ತುಮಕೂರು ಜಿಲ್ಲೆಯಲ್ಲಿ 8 ವಾಹನಗಳು ಅಪಘಾತಕ್ಕೀಡಾಗಿರುತ್ತವೆ.

2) ಬೆಂಗಳೂರು ಜಿಲ್ಲೆಯಲ್ಲಿ 20 ಜನರು ಮೃತಪಟ್ಟಿದ್ದು 66 ಜನರಿಗೆ ಗಾಯಗಳಾಗಿರುತ್ತವೆ. ಕೋಲಾರ ಜಿಲ್ಲೆಯಲ್ಲಿ 11 ಜನರು ಮೃತಪಟ್ಟಿರುತ್ತಾರೆ. ತುಮಕೂರು ಜಿಲ್ಲೆಯಲ್ಲಿ 3 ಜನರು ರಸ್ತೆ ಅಪಘಾತಗಳಲ್ಲಿ ಮೃತಪಟ್ಟಿರುತ್ತಾರೆ.

3) ಪರಿಮಿತಿಗಿಂತ ಹೆಚ್ಚಾಗಿ ಭಾರ ಹೇರುವ ಅತಿ ವೇಗ ಹಾಗೂ ಅಜಾಗರೂಕತೆಯಿಂದ ವಾಹನಗಳನ್ನು ಚಲಿಸುವ ಚಾಲಕರುಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಮತ್ತು ಮೋಟಾರು ವಾಹನ ಕಾಯ್ದೆಗಳಡಿ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಪಘಾತಗಳನ್ನು ತಡೆಯುವ ದೃಷ್ಟಿಯಿಂದ ಪೋಲೀಸ್ ಅಧಿಕಾರಿಗಳು ವಾಹನಗಳನ್ನು ತಪಾಸಣೆ ಮಾಡಿ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುವರು.

ನನ್ನ ಅಧ್ಯಕ್ಷತೆಯಲ್ಲಿ ವಿವಿಧ ಅಧಿಕಾರಿಗಳನ್ನು ಒಳಗೊಂಡ ರಾಜ್ಯ ರಸ್ತೆ ಸುರಕ್ಷತಾ ಸಮಿತಿಯನ್ನು ರಚಿಸಿದ್ದು ಈ ಸಮಿತಿಯ ಅಡಿಯಲ್ಲಿ ಸಭೆ ನಡೆಸಿ ವಿವಿಧ ಇಲಾಖೆಗಳ ವತಿಯಿಂದ ಆಗಬೇಕಾಗಿರುವ ಕೆಲಸಗಳು ಶೀಘ್ರವಾಗಿ ಆಗುವಂತೆ ಸೂಚನೆಗಳನ್ನು ನೀಡಲಾಗುತ್ತಿದೆ. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಂಬ್ಯುಲೆನ್ಸ್ ಹಾಗೂ ಕ್ರೇನ್‌ಗಳ ಖರೀದಿಗೆ ಕೇಂದ್ರ ಸರ್ಕಾರದ ಧನ ಸಹಾಯ ಕೋರಲಾಗಿದೆ.

ರಸ್ತೆ ಅಪಘಾತಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸರ್ಕಾರ ರಸ್ತೆಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳುತ್ತಿದೆ. ಚಾಲಕರಿಗೆ ತರಬೇತಿ ನೀಡುವುದು, ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸುವುದು, ಪದೇ ಪದೇ ಅಪಘಾತವಾಗುವ ಸ್ಥಳಗಳನ್ನು ಗುರುತಿಸಿದ್ದು, ಅವುಗಳ ದುರಸ್ತಿಗೆ ಕ್ರಮ ತೆಗೆದುಕೊಳ್ಳಲಾಗಿದೆ. ರಸ್ತೆ ಬದಿಯಲ್ಲಿ ರಸ್ತೆಗೆ ಚಾಚುವಂತೆ ಇರುವ ಮರಗಳನ್ನು ತೆಗೆಯುವುದು, ಅನಧಿಕೃತವಾಗಿ ನಿರ್ಮಿಸಿರುವ ಡಾಬಾಗಳನ್ನು ತೆಗೆಯುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಜಿಲ್ಲಾ ಮಟ್ಟದಲ್ಲಿಯೂ ಸಹ ಜಿಲ್ಲಾಧಿಕಾರಿಗಳು, ಶಾಸಕರು, ಸಂಸತ್ ಸದಸ್ಯರ ಹಾಗೂ ಇತರೆ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ ಜಿಲ್ಲಾ ಮಟ್ಟದಲ್ಲಿ ಅಗತ್ಯವಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯ ರಸ್ತೆ ಸುರಕ್ಷತಾ ಸಮಿತಿಗಳಿಗೆ ಅನುದಾನ ನೀಡಿದ್ದು ಈ ಹಣದಿಂದ ರಸ್ತೆ ಸುರಕ್ಷತೆ ಬಗ್ಗೆ ತುರ್ತಾಗಿ ಆಗಬೇಕಾಗಿರುವ ಕೆಲಸಗಳನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಲಾಗಿದೆ.

4) ವಿವಿಧ ವಾಹನಗಳಿಗೆ ವಯೋಮಿತಿಯನ್ನು ನಿಗಧಿಪಡಿಸಲು 1988ನೇ ಮೋಟಾರು ವಾಹನ ಕಾಯ್ದೆಯ ಪ್ರಕರಣ 59ರ ರೀತ್ಯಾ ಕೇಂದ್ರ ಸರ್ಕಾರಕ್ಕೆ ಅಧಿಕಾರವಿದ್ದು ಈ ಬಗ್ಗೆ ತೀರ್ಮಾನವನ್ನು ಕೇಂದ್ರ ಸರ್ಕಾರವೇ ಕೈಗೊಳ್ಳಬೇಕಾಗಿದೆ.

5) ಉದ್ಭವಿಸುವುದಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವುದು ಏನೆಂದರೆ, ಈ ಮರಳು ಮತ್ತು ಕಲ್ಲು ತರುವಂಥ ಲಾರಿಗಳು ಬರುವಾಗ ಬಹಳಷ್ಟು ಯಮಪಾಶವನ್ನು ಹಿಡಿದುಕೊಂಡೇ ಬರುತ್ತವೆಯೇನೋ ಎನ್ನುವಂಥಾದ್ದು ನಮ್ಮ ಗಮನಕ್ಕೆ ಬರುತ್ತದೆ. ಅದರಲ್ಲಿ ಡ್ರೈವರುಗಳಿಗೆ ಲೈಸೆನ್ಸ್ ಇರುವುದಿಲ್ಲ, ಆ ಲಾರಿಗಳನ್ನು ನೋಡಿದರೆ ಟೈರುಗಳು ಇರುವುದಿಲ್ಲ, ಟೈರೆಲ್ಲಾ ಸವೆದು ಹೋಗಿರುತ್ತದೆ. ಅದನ್ನು ಅಧ್ಯಕ್ಷರಾದ ತಾವೂ ಕೂಡ ಗಮನಿಸಿರುತ್ತೀರಿ. ತಮ್ಮ ಕಾರಿಗೆ ಕೆಂಪು ದೀಪ ಇದೆ. ತಮ್ಮ ಕಾರನ್ನು ನೋಡಿದರೆ ಅವರು ಪಕ್ಕಕ್ಕೆ ಹೋಗುತ್ತಾರೋ ಏನೋ!

ಅಧ್ಯಕ್ಷರು: ನಾನು ನಿಲ್ಲಿಸಿಬಿಟ್ಟು ಸಮಾಧಾನ ಮಾಡಿ ಬಂದಿದ್ದೇನೆ. ಹಾಗೆಯೇ ಹೋದರೆ ಕಲ್ಲು ಹೊಡೆಯುತ್ತಾರೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರಿಗೇ ಈ ಸಮಸ್ಯೆ ಬಂದಿದೆ! ಇಂತಹ ಪರಿಸ್ಥಿತಿಯಲ್ಲಿ ಸಾಮಾನ್ಯ ಮನುಷ್ಯನ ಪರಿಸ್ಥಿತಿ ಏನು ಎನ್ನುವುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ಲೈಸೆನ್ಸ್ ಕೊಡುವಂಥ ಪದ್ಧತಿಯನ್ನು ಹಿಡಿದುಕೊಂಡು ಆ ಎಫ್.ಸಿ. ಮಾಡುವ ಪದ್ಧತಿ ಕೂಡ

ಇರಬಹುದು, ಅವರು ಕುಳಿತುಕೊಂಡಲ್ಲೇ ಎಲ್ಲಿ ಬೇಕಾದರೂ ಮಾಡುವಂಥ ಪರಿಸ್ಥಿತಿ ಇದೆ. ಇವು ಬಂದು ಎಲ್ಲೆಂದರಲ್ಲಿ ಹೊಡೆದು ಹೊಡೆದು ಜನ ಸಾಯುವುದರ ಜತೆಗೆ ಬೇರೆಯವರೂ ಸಾಯುವಂಥ ಪರಿಸ್ಥಿತಿ ಇದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಕ್ಕೆ ನೀವು ಹೇಳಿದ್ದನ್ನು ನೋಡಿದರೆ ನೀವು ಲೈಸೆನ್ಸ್ ಕೊಡುವುದರಲ್ಲಿ ಪೋಲೀಸರಿಗೆ ಸೂಚನೆ ಕೊಡುತ್ತೀರಿ. ಆದರೆ ಸ್ವಾಮಿ, ನಾನು ಆಗ ಶಾಸಕನಾಗಿರಲಿಲ್ಲ. ನಾನು ಒಂದು ಸಾರಿ ಆರ್.ಟಿ.ಓ.ಗೆ ಫೋನ್ ಮಾಡಿದರೆ ಡ್ರೈವಿಂಗ್ ಲೈಸೆನ್ಸ್ ನಮ್ಮ ಮನೆಗೇ ಬಂತು. ಈ ಪರಿಸ್ಥಿತಿ ಇದೆ.

ಅಧ್ಯಕ್ಷರು: ಸಪ್ಲಿಮೆಂಟರಿ ಕೇಳಿ.

ಶ್ರೀ ಕೆ.ಶ್ರೀನಿವಾಸಗೌಡ: ಅದನ್ನೇ ಕೇಳುತ್ತಿದ್ದೇನೆ. ಈ ಪರಿಸ್ಥಿತಿಗೆ ಇವತ್ತು ಸಿಟಿಜನ್ ಚಾರ್ಟರ್, ಕಂಪ್ಯೂಟರೈಜೇಶನ್, ರೋಡ್‌ಸೇಫ್ಟಿ ಇದೆಲ್ಲಾ ಇದ್ದರೂ, ಈಗ ಏನಾಗಿದೆ ಎಂದರೆ, ನಮ್ಮ ರಸ್ತೆಗಳು ಓಬಿರಾಯನ ಕಾಲದ ರಸ್ತೆಗಳು. ಆವತ್ತು 60-70 ಕಿಲೋಮೀಟರ್ ಸ್ಪೀಡ್‌ನಲ್ಲಿ ಹೋಗುವಂಥ ಬಸ್ಸುಗಳು ಇದ್ದವು, ಕಾರುಗಳು ಇದ್ದವು.

೧೨.೦೦ ಪಿ.ಎಂ.

ಇವತ್ತು ನೂರನಲ್ವತ್ತು ಇನ್ನೂರು ಕಿಲೋಮೀಟರ್ ವೇಗದಲ್ಲಿ ಹೋಗುವಂಥ ಬಸ್ಸುಗಳು, ಕಾರುಗಳು ಬಂದಿವೆ. ಆದ್ದರಿಂದ ಇವತ್ತು ರಸ್ತೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡದೆಯೇ ಹೈ ಸ್ಪೀಡ್ ವೆಹಿಕಲ್‌ಗಳನ್ನು ಬಿಡುವುದರಿಂದ ಈ ರೀತಿ ಅಪಘಾತಗಳಾಗುತ್ತಿದೆ. ಆದ್ದರಿಂದ ರೋಡ್ ಇನ್‌ಫ್ರಾಸ್ಟ್ರಕ್ಚರನ್ನು ಡೆವಲಪ್ ಮಾಡಲು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಅಪಘಾತಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಭಾರಿ ಸರಕು ಸಾಗಾಣಿಕೆ ಮಾಡುವಂಥ ವಾಹನಗಳನ್ನು ತಡೆಗಟ್ಟುವುದರ ಬಗ್ಗೆಯೂ ಸಾರಿಗೆ ಇಲಾಖೆ ಮತ್ತು ಪೋಲೀಸ್ ಇಲಾಖೆಯಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಾವು ಇಲ್ಲಿಯವರೆಗೆ ಭಾರಿ ಸರಕು ಸಾಗಾಣಿಕೆ ಮಾಡುವಂಥ ವಾಹನಗಳ ತಪಾಸಣೆ ಮಾಡುತ್ತಿದ್ದದ್ದು ನಮಗೆ ಆದಾಯ ಬರುತ್ತದೆ ಎಂಬ ಒಂದೇ ಒಂದು ಉದ್ದೇಶಕ್ಕಾಗಿ ಅಲ್ಲ. ಈ ಹಿಂದೆಯೂ ಮಾನ್ಯ ಸದಸ್ಯರು ಇದೇ ಸದನದಲ್ಲಿ ಅಪಘಾತವನ್ನು ತಡೆಗಟ್ಟುವ ಬಗ್ಗೆ ಪ್ರಶ್ನೆ ಕೇಳಿದ್ದಾಗ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಮುಂದಿನ ವರ್ಷದಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಆ ಮಾಹಿತಿಯ ಪ್ರಕಾರ ಇಡೀ ರಾಜ್ಯಾದ್ಯಂತ ರಸ್ತೆ ಸುರಕ್ಷತಾ ಸಮಿತಿಯ ಕಾರ್ಯ ಚಟುವಟಿಕೆಗಳನ್ನು ನಾವು ಹಮ್ಮಿಕೊಳ್ಳುವುದರ ಮೂಲಕ ಇಂಥ ನ್ಯೂನತೆಗಳು ಇರುವುದರ ಬಗ್ಗೆ ಕಾನೂನಿನ ಕ್ರಮ ಜರುಗಿಸುವಲ್ಲಿ ನಾವೇನೂ ಹಿಂದೆ ಬಿದ್ದಿಲ್ಲ. ಅವರು ಹೇಳಿದಂತೆ ಅನೇಕ

ಸರಕು ಸಾಗಾಣಿಕೆ ಮಾಡುವಂಥ ವಾಹನಗಳ ಮೇಲೆ ಪೋಲೀಸ್ ಇಲಾಖೆಯಿಂದ ಮೊಕದ್ದಮೆ ಹಾಕುವುದರ ಮೂಲಕ, ಸಾರಿಗೆ ಇಲಾಖೆಯ ಮೂಲಕ ಮೊಕದ್ದಮೆಯನ್ನು ಹಾಕುವುದರ ಮೂಲಕ ಅನೇಕ ವಾಹನಗಳ ಪರವಾನಗಿ ನಿಂಡಿರತಕ್ಕದ್ದನ್ನು ಅಮಾನತ್ತಿನಲ್ಲಿ ಇಟ್ಟಿದ್ದೇವೆ. ಚಾಲಕರಿಗೆ ಕೊಟ್ಟಿರುವ ಪರವಾನಗಿಯನ್ನು ರದ್ದು ಮಾಡುವಂಥ ಅಧಿಕಾರವನ್ನು ಪಡೆಯುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ಕೊಟ್ಟಿದ್ದೇವೆ. ಚಾಲಕರಿಗೆ ಪರವಾನಗಿ ನೀಡುವಾಗ ದಕ್ಷತೆ, ಮಾಹಿತಿ ಇರುವವರಿಗೆ ಮಾತ್ರ ಪರವಾನಗಿ ಕೊಡುವುದರ ಬಗ್ಗೆ ಕಾನೂನಿಗೆ ತಿದ್ದುಪಡಿ ತರುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಪ್ರಸ್ತಾವನೆ ನೀಡಿರುತ್ತೇವೆ. ಇನ್ನು ಟೈರ್ ಸವೆದಿರುವ ಬಗ್ಗೆ ಹೇಳುವುದಾದರೆ, ಒಂದು ವೇಳೆ ಟೈರು ಒಡೆದು ಅಪಘಾತವಾದರೆ ಇಂಥಾದ್ದನ್ನು ತಡೆಗಟ್ಟುವುದರ ಬಗ್ಗೆ ಯಾವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರೇ ಮಾಹಿತಿ ಕೊಡಬೇಕು. ಏಕೆಂದರೆ ಇವತ್ತು ಹೊಸ ಟೈರನ್ನು ಹಾಕಿಕೊಂಡು ಹೋದಾಗ್ಯೂ ಟೈರು ಬರ್ಸ್ಟ್ ಆಗಿ ಅಪಘಾತವಾಗಿರುವುದನ್ನು ನಾವು ನೋಡಿದ್ದೇವೆ. ಫಿಜಿಕಲ್ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವಂಥ ಸಂದರ್ಭದಲ್ಲಿದ್ದ ಕೆಲವು ನ್ಯೂನತೆಗಳ ಬಗ್ಗೆ ಸಾಕಷ್ಟು ಬಿಗಿ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ವಾಹನವು ಉತ್ತಮ ಸ್ಥಿತಿಯಲ್ಲಿಲ್ಲದಿದ್ದರೆ ನಾವು ಅದಕ್ಕೆ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುತ್ತಿಲ್ಲ. ಇದರ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಇದರ ಜೊತೆಗೆ ಮರಳು, ಕಲ್ಲು ಮತ್ತು ಇಟ್ಟಿಗೆಯನ್ನು ಸಾಗಾಣಿಕೆ ಮಾಡುವುದರ ಬಗ್ಗೆ ಗಣಿ ಮತ್ತು ಭೂಗರ್ಭ ಇಲಾಖೆಯವರು ಹೆಚ್ಚು ಮರಳನ್ನು ಸಾಗಾಣಿಕೆ ಮಾಡಬಾರದು ಎಂದು ಕಾನೂನನ್ನು ತಂದಿದ್ದಾರೆ. ಹೆಚ್ಚು ಮರಳನ್ನು ತುಂಬಿಕೊಂಡು ಬರುವವರ ಮೇಲೆ ಕಾನೂನಿನ ಕ್ರಮಗಳನ್ನು ಜರುಗಿಸುತ್ತಿದ್ದೇವೆ. ಇದನ್ನು ತಡೆಗಟ್ಟುವ ಎಲ್ಲಾ ಪ್ರಯತ್ನಗಳನ್ನೂ ನಾವು ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರಸ್ತೆ ಸುರಕ್ಷತಾ ಸಮಿತಿಯ ವತಿಯಿಂದ ಖರ್ಚು ಮಾಡಲು 260 ಲಕ್ಷ ರೂಪಾಯಿಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ಒದಗಿಸಿರುವುದು ಹೆಮ್ಮೆಯ ವಿಚಾರವಾಗಿದೆ. ಇದರಲ್ಲಿ ಪ್ರತಿ ಜಿಲ್ಲೆ ಜಿಲ್ಲಾಧಿಕಾರಿಗಳಿಗೆ 10 ಲಕ್ಷ ರೂಪಾಯಿಗಳನ್ನು ಕೊಡುವುದರ ಮೂಲಕ ಜಿಲ್ಲಾ ಮಟ್ಟದಲ್ಲೂ ರಸ್ತೆ ಸುರಕ್ಷತಾ ಸಮಿತಿಗಳನ್ನು ರಚನೆ ಮಾಡಿ ಅಪಘಾತಗಳು ಆಗುವಂಥ ಜಾಗಗಳನ್ನು ಗುರುತಿಸಿ ಅಲ್ಲಿ ಸಾಮಫಲಕಗಳನ್ನು ಅಳವಡಿಸುವುದರ ಮೂಲಕ ಅದರ ಜೊತೆಗೆ ರಸ್ತೆ ತಿರುವುಗಳನ್ನು ಅಗಲಗೊಳಿಸುವುದು ಹಾಗೂ ಅಭಿವೃದ್ಧಿಗೊಳಿಸುವುದಕ್ಕಾಗಿ ಅನೇಕ ಸಂದರ್ಭಗಳಲ್ಲಿ ಸಭೆ ನಡೆಸುವ ಮೂಲಕ ನಿರ್ಣಯ ತೆಗೆದುಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಸೂಚನೆ ಕೊಟ್ಟಿದ್ದೇವೆ. ಅಪಘಾತವಾಗುವಂಥ ವ್ಯಕ್ತಿಗಳಿಗೆ ತಕ್ಷಣವೇ ಚಿಕಿತ್ಸೆ ದೊರೆಯಬೇಕೆಂಬ ಉದ್ದೇಶದಿಂದ ಟ್ರಾಮಾ ಕೇರ್ ಸೆಂಟರ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಅನೇಕ ಕಡೆಗಳಲ್ಲಿ ಟ್ರಾಮಾ ಕೇರ್ ಸೆಂಟರ್‌ನ ಕಟ್ಟಡದ ಕೆಲಸ ಪೂರ್ಣಗೊಂಡಿದ್ದು ಅಲ್ಲಿ ಅಗತ್ಯವಾಗಿ ಬೇಕಾದಂಥ ಎಲ್ಲಾ ಸಾಮಗ್ರಿಗಳನ್ನು ಒದಗಿಸುವ ಪ್ರಯತ್ನದಲ್ಲಿದ್ದೇವೆ. ಉದಾಹರಣೆಗೆ, ನೆಲಮಂಗಲದಲ್ಲಿ ಸಂಪೂರ್ಣವಾದ ಟ್ರಾಮಾ ಕೇರ್ ಸೆಂಟರ್‌ನ್ನು ಪ್ರಾರಂಭ ಮಾಡಿದ್ದೇವೆ. ಅಲ್ಲಿಗೆ ಆಂಬ್ಯುಲೆನ್ಸ್ ಮತ್ತು ಕ್ರೇನ್‌ನ್ನು ಒದಗಿಸಿಕೊಟ್ಟಿದ್ದೇವೆ. ಪ್ರತಿ ಜಿಲ್ಲೆಯಲ್ಲೂ ಒಂದು ಆಂಬ್ಯುಲೆನ್ಸ್ ವ್ಯಾನನ್ನು

ಒದಗಿಸಿದ್ದೇವೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳನ್ನು ತಡೆಯಲು, ಸಂಚಾರ ಸ್ಥಗಿತವಾಗಬಾರದೆಂದು ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳಿಗೆ ಕ್ರೇನ್‌ಗಳನ್ನು ಒದಗಿಸಿಕೊಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ಅಪಘಾತಗಳನ್ನು ತಡೆಯುವುದಕ್ಕೋಸ್ಕರವಾಗಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರದಿಂದ ಹಮ್ಮಿಕೊಳ್ಳಲು ಈಗಾಗಲೇ ಸಾರಿಗೆ ಮತ್ತು ಪೋಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿದ್ದೇವೆ. ಅಪಘಾತಗಳನ್ನು ತಡೆಯುವಂಥ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ: 15 ವರ್ಷಕ್ಕೂ ಮೇಲ್ಪಟ್ಟ ಹಳೆಯದಾದ ಸಾಗಾಣಿಕೆ ವಾಹನಗಳನ್ನು ಸ್ಥಗಿತಗೊಳಿಸಲು ಸರ್ಕಾರವೇನಾದರೂ ಕ್ರಮ ತೆಗೆದುಕೊಂಡಿದೆಯೇ ಎಂಬ ನನ್ನ ಪ್ರಶ್ನೆಗೆ ವಿವಿಧ ವಾಹನಗಳಿಗೆ ವಯೋಮಿತಿಯನ್ನು ನಿಗಧಿಪಡಿಸಲು 1988ನೇ ಮೋಟಾರು ವಾಹನ ಕಾಯ್ದೆಯ ಪ್ರಕರಣ 59ರ ರೀತ್ಯಾ ಕೇಂದ್ರ ಸರ್ಕಾರಕ್ಕೆ ಅಧಿಕಾರವಿದ್ದು ಈ ಬಗ್ಗೆ ತೀರ್ಮಾನವನ್ನು ಕೇಂದ್ರ ಸರ್ಕಾರವೇ ಕೈಗೊಳ್ಳಬೇಕಾಗಿದೆಯೆಂದು ತಿಳಿಸಿದ್ದಾರೆ. ತಾವು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ಮೇಲೆ ಇದರ ಬಗ್ಗೆ ಏನಾದರೂ ಒತ್ತಡ ಹೇರಿದ್ದೀರಾ? ನೀವು ಪತ್ರವನ್ನೇನಾದರೂ ಬರೆದಿದ್ದೀರಾ ಅಥವಾ ಸಾರಿಗೆ ಸಚಿವರುಗಳ ಕಾನ್‌ಫರೆನ್ಸ್‌ನಲ್ಲಿ ಈ ವಿಚಾರವನ್ನೆತ್ತಿ ಈ ತರಹ ಪರಿಸ್ಥಿತಿ ಹೀಗಿದೆ, ಎಲ್ಲಾ ಅಪಘಾತಗಳಿಗೆ ಇದು ಹಾದಿಯಾಗುತ್ತದೆ ಎಂದು ಏನಾದರೂ ಹೇಳಿದ್ದೀರಾ? ಇದನ್ನು ಮಾಡದೆಯೇ ಕೇವಲ ಕೇಂದ್ರ ಸರ್ಕಾರವೇ ಇದನ್ನು ಮಾಡಲಿ, ನಮಗೇನೂ ಗೊತ್ತಿಲ್ಲ ಎಂಬ ಭಾವನೆಯಲ್ಲಿ ತಾವೇನಾದರೂ ಇದ್ದೀರಾ?

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. 15 ವರ್ಷಕ್ಕೂ ಮೇಲ್ಪಟ್ಟ ವಾಹನವನ್ನು ಉಪಯೋಗ ಮಾಡಬಾರದೆಂದು ಸುಪ್ರೀಮ್ ಕೋರ್ಟ್ ಏನು ಆದೇಶ ನೀಡಿದೆ ಅದು ದೆಹಲಿ ನಗರಕ್ಕೆ ಮಾತ್ರ ಅನ್ವಯವಾಗುತ್ತದೆ. ಬೇರೆ ರಾಜ್ಯಗಳಿಗೆ ಅದು ಅನ್ವಯಿಸುವುದಿಲ್ಲ ರಾಷ್ಟ್ರಮಟ್ಟದಲ್ಲಿ ಕರೆದಿದ್ದಂಥ ಸಾರಿಗೆ ಸಚಿವರ ಸಭೆಯಲ್ಲಿಯೂ ಈ ವಿಚಾರ ಪ್ರಸ್ತಾಪವಾಗಿದೆ. ಆಗ 15 ವರ್ಷಕ್ಕೂ ಮೇಲ್ಪಟ್ಟ ವಾಹನಗಳನ್ನು ರಸ್ತೆ ಸಂಚಾರದಿಂದ ತೆಗೆಯುವ ಬಗ್ಗೆ ಪರಿತೀಲನೆ ಮಾಡಲು ಒಂದು ಉಪಸಮಿತಿಯನ್ನು ರಚನೆ ಮಾಡಲಾಗಿದೆ. ಅದರ ವರದಿಯನ್ನು ಕೇಂದ್ರ ಸಾರಿಗೆ ಸಚಿವರು ಕೇಳಿದ್ದಾರೆ. ಆ ವರದಿಯು ಬಂದ ನಂತರ ಕೇಂದ್ರ ಸಾರಿಗೆ ಸಚಿವರ ಸಮಕ್ಷಮದಲ್ಲಿ ನಡೆಯುವಂಥ ರಾಜ್ಯ ಸಾರಿಗೆ ಸಚಿವರ ಸಭೆಯಲ್ಲಿ ಇದರ ಬಗ್ಗೆ ನಿರ್ಣಯವಾಗುವ ಸಾಧ್ಯತೆಗಳಿವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಕೇರಳ ರಾಜ್ಯದಿಂದ ಮರಳಿನ ಲಾರಿಗಳು ಟಾರ್ಪಾಲ್ ಮುಚ್ಚಿಕೊಂಡು ತರುತ್ತಿದ್ದಾರೆ. ಇದರಿಂದ ಅಪಘಾತಗಳು ಬಹಳ ಆಗುತ್ತಿವೆ.

ಅಧ್ಯಕ್ಷರು: ತಾವು ಕುಳಿತುಕೊಳ್ಳಿ, ನಮಗೆ ಸಮಯವಿಲ್ಲ ತಾವು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿಲ್ಲ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇದರಿಂದ ಬಹಳ ತೊಂದರೆಯಾಗುತ್ತಿದೆ. ಬೈಕಿನಲ್ಲಿ ಬರುವವರಿಗೆ ಕಣ್ಣಿಗೆ ಮರಳು ಹಾರಿ ತೊಂದರೆಯಾಗುತ್ತಿದೆ.

ಅಧ್ಯಕ್ಷರು: ಇದು ಗೊತ್ತಿದೆ, ಆದರೆ ತಾವು ಕುಳಿತುಕೊಳ್ಳಿ.

ಐಎಎಸ್, ಐಪಿಎಸ್ ಸಮಾನ ಹುದ್ದೆಯಲ್ಲಿರುವ ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವುದರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 89(1472)

ಸದಸ್ಯರ ಹೆಸರು: ಶ್ರೀ ಎನ್.ಸಂಪಂಗಿ(ಬಾಗೇಪಲ್ಲಿ)

ಪ್ರಶ್ನೆ

1) ಯಾವ ಯಾವ ಐಎಎಸ್, ಐಪಿಎಸ್, ಐಎಫ್ಎಸ್ ಮತ್ತು ಕೆಎಎಸ್ ಅಧಿಕಾರಿಗಳಿಗೆ ಬೆಂಗಳೂರು ನಗರ ಮತ್ತು ಇತರೇ ನಗರಗಳಲ್ಲಿ ಒಂದಕ್ಕಿಂತ ಹೆಚ್ಚು ನಿವೇಶನಗಳಿವೆ? (ಅಂತಹ ಅಧಿಕಾರಿಗಳ ಹೆಸರುಗಳನ್ನು ನೀಡುವುದು)

2) ಒಂದಕ್ಕಿಂತ ಹೆಚ್ಚು ನಿವೇಶನ ಹೊಂದಿರುವ ಇಂತಹ ಅಧಿಕಾರಿಗಳಿಗೆ ಸರ್ಕಾರದಿಂದ ನೋಟೀಸ್ ನೀಡಿರುವುದು ನಿಜವೇ?

3) ನೋಟೀಸ್ ನಂತರವೂ ಸಂಬಂಧಪಟ್ಟ ಅಧಿಕಾರಿಗಳು ಉತ್ತರ ನೀಡದೇ ಇರುವುದು ನಿಜವೇ? ಉತ್ತರ ನೀಡದೇ ಇರುವ ಅಧಿಕಾರಿಗಳ ಹೆಸರುಗಳನ್ನು ನೀಡುವುದು ಮತ್ತು ಈ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಉತ್ತರಿಸುವ ಮಂತ್ರಿಗಳು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು)

ಉತ್ತರ

1) ಸರ್ಕಾರದ ಸುತ್ತೋಲೆ ಸಂಖ್ಯೆ:ಡಿಪಿಎಆರ್ 261 ಎಸ್ಎಂಇ 99 ದಿನಾಂಕ: 5-11-99ರನ್ವಯ ಸರ್ಕಾರಿ ಅಧಿಕಾರಿಗಳ : ನೌಕರರು ಸರ್ಕಾರದ ಏಜನ್ಸಿಗಳಾದಂತಹ ಕರ್ನಾಟಕ ಹೌಸಿಂಗ್ ಬೋರ್ಡ್, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಗೃಹ ನಿರ್ಮಾಣ